

ಆಂತರ್ ವಿಶ್ವವಿದ್ಯಾಲಯ ವಿಜ್ಞಾನ ಉಪನ್ಯಾಸ ಸ್ಪರ್ಧೆ




ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ 2010





ವಿಜ್ಞಾನ ರೈಲು ಉದ್ಘಾಟನೆ



ಭಾರತ ಜ್ಞಾನ ವಿಜ್ಞಾನ ಜಾಥಾ

- **ರಾಜ್ಯಮಟ್ಟದ ವಿಜ್ಞಾನ ಲೇಖಕರ ಶಿಬಿರಗಳು :** ಉದಯೋನ್ಮುಖ ವಿಜ್ಞಾನ ಬರಹಗಾರರಿಗೆ ಮಾರ್ಗ ದರ್ಶನ ನೀಡುವ ವಿಶೇಷ ಕಾರ್ಯಾಗಾರಗಳು.
- **ರಾಜ್ಯಮಟ್ಟದ ಜನಪ್ರಿಯ ಸಾಹಿತಿಗಳ ಸಮ್ಮೇಳನ :** ರಾಜ್ಯದ ಎಲ್ಲಾ ವಿಜ್ಞಾನ ಸಾಹಿತಿಗಳನ್ನು ಒಂದೇ ವೇದಿಕೆಯಲ್ಲಿ ಸೇರಿಸಿ ಕೃತಿ–ವಿಮರ್ಶೆ, ಚರ್ಚೆ, ಸಂವಾದಗಳೊಂದಿಗೆ ವಿಚಾರವಿನಿಮಯಕ್ಕೆ ಆವಕಾಶ ಕಲ್ಪಿಸುವ ವಿಶಿಷ್ಟ ಕಾರ್ಯಕ್ರಮ.
- **ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನ :** ವಿಜ್ಞಾನಾಸಕ್ತರೆಲ್ಲರೂ ಮೂರು ವರ್ಷಗಳಿಗೊಮ್ಮೆ ಸೇರಿ ವಿಜ್ಞಾನದ ವಿವಿಧ ಆಯಾಮಗಳನ್ನು ಚರ್ಚಿಸುವ ಅಪೂರ್ವ ವೇದಿಕೆ.
- **ಯುವ ವಿಜ್ಞಾನಿ ಪ್ರಶಸ್ತಿ ಪ್ರದಾನ :** ರಾಜ್ಯದಾದ್ಯಂತ ವಿವಿಧ ಸ್ಥಳಗಳಲ್ಲಿ ತಮ್ಮ ಪ್ರತಿಭೆಯಿಂದ ಗುರುತಿಸಲ್ಪಟ್ಟ ಪ್ರೌಢಶಾಲಾ ವಿದ್ಯಾರ್ಥಿಗಳ ನಡುವೆ ಸ್ಪರ್ಧೆ ಏರ್ಪಡಿಸಿ ತನ್ಮೂಲಕ ರಾಜ್ಯಮಟ್ಟದ ಯುವವಿಜ್ಞಾನಿಯನ್ನು ಆಯ್ಕೆಮಾಡಿ ಪುರಸ್ಕರಿಸುವ ವಿಶಿಷ್ಟ ಯೋಜನೆ.
- **ಕಾಲೇಜು ವಿದ್ಯಾರ್ಥಿಗಳಿಗಾಗಿ ವಿಜ್ಞಾನ ಪ್ರದರ್ಶನ :** ಪದವಿ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯೊಂದಿಗೆ ವಿಶೇಷ ವಿಜ್ಞಾನ ಮಾದರಿಗಳನ್ನು ತಯಾರಿಸಿ ಪ್ರದರ್ಶಿಸುವ ಕಾರ್ಯಕ್ರಮ. ಅತ್ಯುತ್ತಮ ಮಾದರಿಗಳನ್ನು ವಿನ್ಯಾಸಗೊಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನ/ಪುರಸ್ಕಾರ ಪ್ರದಾನ.
- **ಅಂತರ್ ವಿಶ್ವವಿದ್ಯಾಲಯ ವಿಜ್ಞಾನ ಉಪನ್ಯಾಸ ಸ್ಪರ್ಧೆ :** ಪದವಿ ವಿದ್ಯಾರ್ಥಿಗಳು ವಿಜ್ಞಾನದ ವಿಷಯದಲ್ಲಿ ಸಮರ್ಪಕವಾಗಿ ತಮ್ಮ ವಾಕ್‌ಪ್ರತಿಭೆಯನ್ನು ಪ್ರದರ್ಶಿಸಿ ಬಹುಮಾನ ಪಡೆಯುವ ರಾಜ್ಯಮಟ್ಟದ ಕಾರ್ಯಕ್ರಮ.
- **ಕನ್ನಡ ವಿಜ್ಞಾನ ಪುಸ್ತಕಗಳಿಗೆ ಬಹುಮಾನ ಯೋಜನೆ :** ಉತ್ತಮ ವಿಜ್ಞಾನ ಲೇಖನಗಳನ್ನು ಬರೆಯುತ್ತಿರುವ ಲೇಖಕರ ಕೃತಿಗಳಿಗೆ ಉತ್ತೇಜನ ನೀಡುವ ಯೋಜನೆ.
- **ಇಕೋ ಕ್ಲಬ್‌ಗಳು :** ರಾಜ್ಯವ್ಯಾಪಿಯಾಗಿ ಆಯ್ದ ಪ್ರೌಢಶಾಲೆಗಳಲ್ಲಿ ಪರಿಸರ ಸ್ನೇಹಿ ಚಟುವಟಿಕೆಗಳನ್ನು ವರ್ಷವಿಡೀ ಕೈಗೊಂಡು ವಿದ್ಯಾರ್ಥಿಗಳನ್ನು ತೊಡಗಿಸುವ ಯೋಜನೆ.
- **ಮೂಢನಂಬಿಕೆ/ಮೌಢ್ಯಗಳ ವಿರುದ್ಧ ಪ್ರಚಾರಾಂದೋಲನ:** ರಾಜ್ಯವ್ಯಾಪಿಯಾಗಿ ವಿವಿಧೆಡೆ ಭಾನಾಮತಿ ಅಥವಾ ಪವಾಡ ಸದೃಶ್ಯ ಘಟನೆಗಳ ಹಿಂದಿನ ಗುಟ್ಟನ್ನು ಬಯಲು ಮಾಡಿ ವೈಜ್ಞಾನಿಕ ಚಿಂತನೆಯನ್ನು ಬೆಳೆಸುವ ಹಾಗೂ ಪ್ರಶ್ನಿಸುವ ಪ್ರವೃತ್ತಿಗೆ ಉತ್ತೇಜನ ನೀಡುವ ವಿಶಿಷ್ಟ ಕಾರ್ಯಕ್ರಮಗಳು.
- **ಗ್ರಾಮೀಣ ಶಾಲಾ ವಿಜ್ಞಾನ ಕೇಂದ್ರಗಳು :** ಕರ್ನಾಟಕ ಸರ್ಕಾರದ ವಿಜ್ಞಾನ ತಂತ್ರಜ್ಞಾನ ಇಲಾಖೆಯ ನೆರವಿನೊಂದಿಗೆ ರಾಜ್ಯಾದ್ಯಂತ ಸುಮಾರು 500 ಸ್ಥಳಗಳಲ್ಲಿ ಗ್ರಾಮೀಣ ಶಾಲಾ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.
- **ಡಾ॥ ಎಚ್.ಎನ್. ಸೃಜನಿಕ :** ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಸ್ಥಾಪಕ ಅಧ್ಯಕ್ಷರಾದ ಡಾ॥ ಎಚ್. ನರಸಿಂಹಯ್ಯ ನವರ ಸ್ಮರಣೆಯಲ್ಲಿ 'ಡಾ॥ ಎಚ್.ಎನ್. ಸೃಜನಿಕ' ಯೋಜನೆ ರೂಪಿಸಲಾಗಿದ್ದು ವಿದ್ಯಾರ್ಥಿಗಳಿಗಾಗಿ ಸೃಜನಾತ್ಮಕ ವಿಜ್ಞಾನ ಕಾರ್ಯಕ್ರಮ / ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ.

## ವಿಜ್ಞಾನ ಜನಪ್ರಿಯಗೊಳಿಸುವಲ್ಲಿ ತಮ್ಮ ಕೊಡುಗೆ/ಸಹಭಾಗಿತ್ವ

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನೊಂದಿಗೆ ನೀವೂ ಸಹ ವಿಜ್ಞಾನ ಜನಪ್ರಿಯಗೊಳಿಸುವ ಮಹೋನ್ನತ ಕಾರ್ಯದಲ್ಲಿ ಕೈಗೂಡಿಸಬಹುದು.

1. **"ಬಾಲವಿಜ್ಞಾನ" ಪತ್ರಿಕೆಗೆ ಚಂದಾದಾರರಾಗುವ ಮೂಲಕ :** ಜನಪ್ರಿಯ ವಿಜ್ಞಾನ ಮಾಸ ಪತ್ರಿಕೆ "ಬಾಲವಿಜ್ಞಾನ"ಕ್ಕೆ ತಾವೂ ಚಂದಾದಾರರಾಗಬಹುದು. ತಮ್ಮ ಮಕ್ಕಳ/ತಮ್ಮ ಮಿತ್ರರ ಮಕ್ಕಳ ಹುಟ್ಟುಹಬ್ಬಕ್ಕೆ ಇದೊಂದು ವಿಶಿಷ್ಟ ಉಡುಗೊರೆಯಾಗಿ ನೀಡಬಹುದು.
   - ಬಾಲವಿಜ್ಞಾನ ವಾರ್ಷಿಕ ಚಂದಾ ಹಣ: ಕೇವಲ ರೂ.100/–
2. **ದಾನಿ ಸದಸ್ಯತ್ವ :** ವಿಜ್ಞಾನ ಪರಿಷತ್ತಿಗೆ ವೈಯಕ್ತಿಕವಾಗಿ ರೂ. 2,000/– ಅಥವಾ ಸಂಘಸಂಸ್ಥೆಗಳು ರೂ. 3,000/– ವಂತಿಗೆ ನೀಡಿ ದಾನಿಸದಸ್ಯತ್ವ ಪಡೆಯಬಹುದು. ತಮ್ಮ ವಂತಿಗೆಗೆ 80G ನಿಯಮದಡಿಯಲ್ಲಿ ತೆರಿಗೆ ವಿನಾಯಿತಿ ಸೌಲಭ್ಯವಿದೆ.
3. **ವಿಜ್ಞಾನ ಘಟಕಗಳು :** ಕನಿಷ್ಠ 10 ವಿಜ್ಞಾನಾಸಕ್ತರು ಸೇರಿ ರೂ.100/– ವಂತಿಗೆ ನೀಡುವುದರೊಂದಿಗೆ ಕ.ರಾ.ವಿ.ಪ. ವಿಜ್ಞಾನ ಘಟಕ ಆರಂಭಿಸಬಹುದು.

ವಿವರಗಳಿಗಾಗಿ ಸಂಪರ್ಕಿಸಬಹುದಾದ ವಿಳಾಸ


**ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು**

ವಿಜ್ಞಾನ ಭವನ, 24/2, 3, 21ನೇ ಮುಖ್ಯ ರಸ್ತೆ,
ಬನಶಂಕರಿ 2ನೇ ಹಂತ, ಬೆಂಗಳೂರು–560 070.
ದೂರವಾಣಿ: (080)26718938/39/62 ಟೆಲಿಫ್ಯಾಕ್ಸ್ : (080)26718959
ಇ–ಮೇಲ್: krvp.info@gmail.com ವೆಬ್‌ಸೈಟ್: www.krvp.org
www.vayugunabadalavane-climatechange.com


## ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

ಕಾರ್ಯಕಾರಿ ಸಮಿತಿ – 2010

### ಪದಾಧಿಕಾರಿಗಳು

| | | |
|---|---|---|
| ಡಾ॥ ಎಚ್.ಎಸ್. ನಿರಂಜನ ಆರಾಧ್ಯ | : | ಅಧ್ಯಕ್ಷರು |
| ಬಿ. ದೊಡ್ಡಬಸಪ್ಪ | : | ಉಪಾಧ್ಯಕ್ಷರು |
| ಡಾ॥ ಎಚ್.ಆರ್. ಸ್ವಾಮಿ | : | ಉಪಾಧ್ಯಕ್ಷರು |
| ಡಾ॥ ವಸುಂಧರಾ ಭೂಪತಿ | : | ಗೌರವ ಕಾರ್ಯದರ್ಶಿ |
| ಪಂಡಿತ್ ಕೆ. ಬಾಳೂರೆ | : | ಜಂಟಿ ಕಾರ್ಯದರ್ಶಿ |
| ಗಿರೀಶ್ ಬಿ. ಕಡ್ಲೇವಾಡ | : | ಖಜಾಂಚಿ |

### ಸದಸ್ಯರು

| | |
|---|---|
| ಪ್ರೊ.ಸಿ.ಡಿ.ಪಾಟೀಲ | ಚಳ್ಳಕೆರೆ ಯರ್ರಿಸ್ವಾಮಿ |
| ಅಶೋಕ್ ಸಜ್ಜನ ಶೆಟ್ಟಿ | ಡಾ॥ ಪ್ರಕಾಶ್. ಸಿ. ರಾವ್ |
| ಶ್ರೀಶೈಲ ವೀರಭದ್ರಪ್ಪ ಘೂಳಿ | ಡಾ॥ ಶೇಖರ್ ಗೌಳೇರ್ |
| ಶೇಖರ್ ಹೊರಪೇಟೆ | ಎಂ.ಎನ್. ಮುಷ್ಟೂರಪ್ಪ |
| ಪ್ರೊ॥ ಎಸ್.ವಿ. ಸಂಕನೂರ | ಶ್ರೀಮತಿ ಹರಿಪ್ರಸಾದ್ |
| ಎಂ.ಎಫ್. ನಾಯ್ಕರ | ನಾಗೇಶ್ ಅರಳಕುಪ್ಪೆ |
| ಆರ್.ಎಸ್. ಪಾಟೀಲ | ತಿಮ್ಮಪ್ಪ |
| ಡಾ॥ ಆರ್.ಎಸ್. ಎಲಿ | ಟಿ.ಜಿ. ಕೃಷ್ಣಮೂರ್ತಿ ರಾಜ್ ಅರಸ್ |
| ಸಂಜಯ್ ಎಸ್. ನಾಗಲೋಟಿಮಠ | ಟಿ.ಜಿ. ಪ್ರೇಮ್ ಕುಮಾರ್ |

### ಪದನಿಮಿತ್ತ ಸದಸ್ಯರು

ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ, ಬೆಂಗಳೂರು

ಅಂತರ್ ಕಾಲೇಜು ರಾಜ್ಯಮಟ್ಟದ ವಿಜ್ಞಾನ ಪ್ರದರ್ಶನ



ಜೀವಿ ಸಂರಕ್ಷಣೆಯ ಕುರಿತು ವಿಚಾರ ಸಂಕಿರಣ



ಕನ್ನಡ ವಿಜ್ಞಾನ ಲೇಖಕರೊಂದಿಗೆ ಡಾ. ಜಿ.ಎಸ್. ಶಿವರುದ್ರಪ್ಪ



ವಿಜ್ಞಾನ ಲೇಖಕರ ಮತ್ತು ಶಿಕ್ಷಕರ ತರಬೇತಿ ಶಿಬಿರ






ಕ.ರಾ.ವಿ.ಪ. ಬೆಳ್ಳಿ ಹಬ್ಬದಲ್ಲಿ ಡಾ. ಕಲಾಂ









ಡಾ॥ ಎಚ್. ನರಸಿಂಹಯ್ಯ
ಸ್ಥಾಪಕ ಅಧ್ಯಕ್ಷರು



ಪ್ರೊ॥ ಸಿ.ಎನ್.ಆರ್. ರಾವ್
ಮಹಾಪೋಷಕರು



ರಾಜ್ಯ ಪ್ರಶಸ್ತಿ



ರಾಷ್ಟ್ರೀಯ ಪ್ರಶಸ್ತಿ

# ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

ವಿಜ್ಞಾನ ಭವನ, ನಂ. 24/2 ಮತ್ತು 24/3, 21ನೇ ಮುಖ್ಯ ರಸ್ತೆ,
ಬನಶಂಕರಿ 2ನೇ ಹಂತ, ಬೆಂಗಳೂರು–560070.









**ವಿಜ್ಞಾನವನ್ನು ಜನತೆಯ ಬಳಿಗೆ ಒಯ್ಯೋಣ**
**ವಿಜ್ಞಾನಕ್ಕಾಗಿ ಜನತೆಯನ್ನು ಒಗ್ಗೂಡಿಸೋಣ**

| | |
|---|---|
| ಡಾ॥ ಎಚ್.ಎಸ್. ನಿರಂಜನ ಆರಾಧ್ಯ | ಡಾ. ವಸುಂಧರಾ ಭೂಪತಿ |
| ಗೌ. ಅಧ್ಯಕ್ಷರು | ಗೌ. ಕಾರ್ಯದರ್ಶಿ |


ರಾಜ್ಯ ಮಟ್ಟದ ವಿಜ್ಞಾನ ರಸಪ್ರಶ್ನೆ ಸ್ಪರ್ಧೆ


ಹಸ್ತಪ್ರತಿ ರಚನಾ ಕಾರ್ಯಾಗಾರ


18ನೇ ಮಕ್ಕಳ ವಿಜ್ಞಾನ ಸಮಾವೇಶ ಉದ್ಘಾಟನೆ


ವಿಜ್ಞಾನ ಲೇಖಕರ ತರಬೇತಿ ಶಿಬಿರ


ಪವಾಡ ಬಯಲು ಕಾರ್ಯಕ್ರಮ


ಕರ್ನಾಟಕ ಸರ್ಕಾರದ 2010–11ನೇ ಸಾಲಿನ ರಾಜ್ಯಪ್ರಶಸ್ತಿ ಪ್ರದಾನ


ರಾಷ್ಟ್ರೀಯ ಪರಿಸರ ಜಾಗೃತಿ ಆಂದೋಲನ

## ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಜನಪ್ರಿಯಗೊಳಿಸುವ ಮತ್ತು ಜನಸಾಮಾನ್ಯರಲ್ಲಿ ವೈಜ್ಞಾನಿಕ ಮನೋಭಾವವನ್ನು ಮೂಡಿಸುವ ಸದುದ್ದೇಶದಿಂದ 1980ರಲ್ಲಿ ಸ್ಥಾಪನೆಗೊಂಡಿರುವ ರಾಜ್ಯಮಟ್ಟದ ಸ್ವಾಯತ್ತ ಸಂಸ್ಥೆ.

ಸಮಾಜದಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸುವ ಶ್ರೇಷ್ಠ ಸಾಂಸ್ಥಿಕ ಪ್ರಯತ್ನಕ್ಕೆ ಮೀಸಲಾದ ಭಾರತ ಸರ್ಕಾರದ ಪ್ರಥಮ ರಾಷ್ಟ್ರೀಯ ಪ್ರಶಸ್ತಿಯನ್ನು(1988)ಹಾಗೂ ಕರ್ನಾಟಕ ಸರ್ಕಾರದ ಅರಣ್ಯ, ಪರಿಸರ ಹಾಗೂ ಜೀವಿಶಾಸ್ತ್ರ ಇಲಾಖೆಯಿಂದ ನೀಡಲಾಗುವ 2010–11ರ ಪರಿಸರ ಪ್ರಶಸ್ತಿಯನ್ನು ಕರಾವಿಪ ತನ್ನದಾಗಿಸಿಕೊಂಡಿದೆ..

### ಧ್ಯೇಯೋದ್ದೇಶಗಳು

❖ ಸಮಾಜದ ವಿವಿಧ ಸ್ಥರಗಳಲ್ಲಿ ವೈಜ್ಞಾನಿಕ ಚಿಂತನೆ, ವಿಜ್ಞಾನ–ಸಾಕ್ಷರತೆ, ಗ್ರಾಮೀಣ ಪ್ರದೇಶಗಳಲ್ಲಿನ ಮೌಢ್ಯಗಳ ನಿವಾರಣೆಗಾಗಿ ಶ್ರಮಿಸುವುದು. . ಮುಖ್ಯವಾಗಿ ಕನ್ನಡದಲ್ಲಿ ಉಪನ್ಯಾಸ, ವಿಚಾರ ಸಂಕಿರಣ, ಸಾರ್ವಜನಿಕ ವಿಚಾರಗೋಷ್ಠಿ, ವಸ್ತುಪ್ರದರ್ಶನಗಳನ್ನು ಏರ್ಪಡಿಸುವುದು ಮತ್ತು ವಿಜ್ಞಾನ ಪುಸ್ತಕಗಳು ಹಾಗೂ ನಿಯತಕಾಲಿಕಗಳನ್ನು ಪ್ರಕಟಿಸಿ ವಿತರಣೆ ಮಾಡುವುದರ ಮೂಲಕ ವಿಜ್ಞಾನವನ್ನು ಜನಪ್ರಿಯಗೊಳಿಸುವುದು. ವಿಜ್ಞಾನ ಸಂಘ, ಸಂಸ್ಥೆಗಳು ರೂಪುಗೊಂಡು ಅಭಿವೃದ್ಧಿಯಾಗಲು ಪ್ರೋತ್ಸಾಹ ನೀಡುವುದು ಹಾಗೂ ವಿಜ್ಞಾನ ಕೇಂದ್ರಗಳ ಸ್ಥಾಪನೆ ಹಾಗೂ ನಿರ್ವಹಣೆ.

❖ ವಿಜ್ಞಾನ ಬರಹಗಾರರು, ವಿಜ್ಞಾನಿಗಳು, ವಿಜ್ಞಾನ ಶಿಕ್ಷಕರು, ಕೈಗಾರಿಕೋದ್ಯಮಿಗಳು, ಪ್ರಕಾಶಕರು ಮತ್ತು ವಿಜ್ಞಾನವನ್ನು ಜನಪ್ರಿಯಗೊಳಿಸುವುದರಲ್ಲಿ ಆಸಕ್ತರಾಗಿರುವವರ ನಡುವೆ ಪರಸ್ಪರ ಸಂಪರ್ಕ ಬೆಳೆಯುವಂತೆ ಪ್ರೋತ್ಸಾಹ ನೀಡುವುದು.

### ಕ.ರಾ.ವಿ.ಪ. ಸಂಘಟನೆ

ನೋಂದಾಯಿತ ಘಟಕಗಳ ಸಂಚಾಲಕರು, ಜಿಲ್ಲಾ ವಿಜ್ಞಾನ ಸಮಿತಿಯ ಸದಸ್ಯರು, ದಾನಿ ಸದಸ್ಯರು ಹಾಗೂ ದಾನಿ ಸಂಸ್ಥೆಗಳು, ವಿಜ್ಞಾನ ಕೇಂದ್ರ ಇತ್ಯಾದಿಗಳು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಅವಿಭಾಜ್ಯ ಅಂಗಗಳು. ಅರ್ಹ ಸದಸ್ಯರಿಂದ ಆಯ್ಕೆಗೊಂಡ ಕಾರ್ಯಕಾರಿ ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳ ಮೂಲಕ ಪರಿಷತ್ತಿನ ಆಡಳಿತ, ಕಾರ್ಯಕ್ರಮಗಳು ಹಾಗೂ ಧ್ಯೇಯೋದ್ದೇಶಗಳನ್ನು ಕಾರ್ಯರೂಪಕ್ಕೆ ತರಲು ನಿರಂತರ ಶ್ರಮಿಸುತ್ತದೆ.

### ಸಂಪನ್ಮೂಲಗಳು

ಕರ್ನಾಟಕ ಸರ್ಕಾರ ಹಾಗೂ ಭಾರತ ಸರ್ಕಾರಗಳ ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಹಾಗೂ ಅರಣ್ಯ, ಜೀವಿಪರಿಸ್ಥಿತಿ ಶಾಸ್ತ್ರ ಇಲಾಖೆ, ಮಾನವ ಸಂಪನ್ಮೂಲ ಅಭಿವೃದ್ಧಿ ಮುಂತಾದ ಇಲಾಖೆಗಳಿಂದ ವಿವಿಧ ಯೋಜನೆಗಳ ಅಡಿಯಲ್ಲಿ ದೊರಕುವ ಧನ ಸಹಾಯ, ಸದಸ್ಯತ್ವ ಶುಲ್ಕ, ದಾನಿಗಳ ವಂತಿಗೆಗಳು ಇತ್ಯಾದಿ.

### ಪ್ರಕಟಣೆಗಳು

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನಿಂದ ಇದುವರೆಗೂ 140ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ವಿಜ್ಞಾನ ಪುಸ್ತಕಗಳನ್ನು ಪ್ರಕಟಿಸಲಾಗಿದೆ.

❖ 1980ರಿಂದ ನಿರಂತರವಾಗಿ ಕನ್ನಡದಲ್ಲಿ ಪ್ರಕಟವಾಗುತ್ತಿರುವ ಹಾಗೂ 25000 ಚಂದಾದಾರರನ್ನು ತಲುಪುತ್ತಿರುವ “ಬಾಲ ವಿಜ್ಞಾನ” ಪರಿಷತ್ತಿನ ಹೆಮ್ಮೆಯ ಮಾಸಪತ್ರಿಕೆ.

### ದೃಶ್ಯ ಶ್ರಾವ್ಯ ಮಾಧ್ಯಮ ಸಾಧನಗಳು

ಕ.ರಾ.ವಿ.ಪ.ದಿಂದ ಹಲವಾರು ಜನಪ್ರಿಯ ವಿಜ್ಞಾನಕ್ಕೆ ಸಂಬಂಧಿಸಿದಂತೆ ಕ್ಯಾಸೆಟ್‌ಗಳು ಚಲನಚಿತ್ರಗಳು, ಸ್ಲೈಡ್‌ಗಳು, ಸಿ.ಡಿ/ಡಿವಿಡಿಗಳನ್ನು ತಯಾರಿಸಿ ವಿತರಿಸಲಾಗುತ್ತದೆ.

### ಸುಲಭ ವಿಜ್ಞಾನ–ಕಲಿಕಾ ಕಿಟ್‌ಗಳು

ಚಟುವಟಿಕೆ/ಪ್ರಯೋಗ/ಮಾದರಿಗಳ ಮೂಲಕ ವಿಜ್ಞಾನದ ವಿವಿಧ ತತ್ವಗಳನ್ನು ಮಕ್ಕಳು ಸುಲಭವಾಗಿ ಅರ್ಥೈಸಿಕೊಳ್ಳಲು ಸಹಾಯಕವಾಗುವ ಹಲವಾರು ಕಿಟ್‌ಗಳನ್ನು ಪರಿಷತ್ತಿನಿಂದ ವಿನ್ಯಾಸಗೊಳಿಸಲಾಗಿದೆ.

- **ಕರ್ನಾಟಕ ವಿಜ್ಞಾನ ವಿದ್ಯಾ ಜಾಗೃತಿ, ವಿದ್ಯಾರ್ಥಿ–ವಿಜ್ಞಾನಿ ನೇರ ಸಂವಾದ :** ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಆಯೋಜನೆಗೊಳ್ಳುತ್ತಿರುವ ವೈಶಿಷ್ಟ್ಯಪೂರ್ಣ ಕಾರ್ಯಕ್ರಮ. ಆಯ್ದ ವಿದ್ಯಾರ್ಥಿಗಳು, ಶಿಕ್ಷಕರು, ವಿಜ್ಞಾನಿಗಳೊಂದಿಗೆ ಬೆರೆತು ಆತ್ಮೀಯ ಸಂವಾದದಲ್ಲಿ ಭಾಗವಹಿಸಿ ತಮ್ಮ ಹಲವಾರು ಕುತೂಹಲಪೂರ್ಣ ಪ್ರಶ್ನೆಗಳಿಗೆ ನೇರ ಉತ್ತರ ಪಡೆಯುವ ಸದವಕಾಶ ಇಲ್ಲಿದೆ.

- **ಕರ್ನಾಟಕ ವಿಜ್ಞಾನ ಶಿಬಿರ :** ಈ ಕಾರ್ಯಕ್ರಮದಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಿಂದ ಆಯ್ಕೆಗೊಂಡ ಸುಮಾರು 700 ಪ್ರತಿಭಾವಂತ ವಿದ್ಯಾರ್ಥಿಗಳು ವಿಖ್ಯಾತ ವಿಜ್ಞಾನಿಗಳೊಡನೆ ಮುಖಾಮುಖಿಯಾಗುವ ಸದವಕಾಶ ಪಡೆಯುತ್ತಾರೆ. ಅವರ ಸಂಶೋಧನೆಗಳನ್ನು ಅರಿಯುತ್ತಾರೆ. ವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನೆಗಳಿಗೆ ಇರುವ ಅವಕಾಶಗಳು, ಸವಾಲುಗಳನ್ನು ತಿಳಿಯಲು ಇದೊಂದು ಅಪೂರ್ವ ಸಂದರ್ಭ.

- **ಮಹಿಳೆ ಮತ್ತು ವಿಜ್ಞಾನ :** ವಿಜ್ಞಾನ ಕ್ಷೇತ್ರದಲ್ಲಿ ವೃತ್ತಿನಿರತರಾಗಿರುವ ಮಹಿಳಾ ವಿಜ್ಞಾನಿಗಳು, ಲೇಖಕಿಯರು, ಶಿಕ್ಷಣತಜ್ಞರೆಲ್ಲ ಒಂದೇ ವೇದಿಕೆಯಲ್ಲಿ ಪರಸ್ಪರ ಸಮಾಲೋಚನೆಗೆ ಅವಕಾಶ ಕಲ್ಪಿಸುವ ಪ್ರಯತ್ನ.

### ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನಿಂದ ಕೈಗೊಳ್ಳಲಾಗುತ್ತಿರುವ ಪ್ರಮುಖ ಕಾರ್ಯಕ್ರಮ/ಯೋಜನೆಗಳು

- **ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ :** ತಾಲ್ಲೂಕು, ಜಿಲ್ಲಾಮಟ್ಟಗಳಿಂದ ರಾಷ್ಟ್ರ ಮಟ್ಟದವರೆಗೂ ಪ್ರತಿಭಾನ್ವಿತ ಗ್ರಾಮೀಣ ಹಾಗೂ ನಗರ ಪ್ರದೇಶದ ಹಿರಿಯ/ಕಿರಿಯ ವಿದ್ಯಾರ್ಥಿಗಳು ಭಾಗವಹಿಸಿ ತಮ್ಮ ಪ್ರತಿಭೆಗೆ ಮನ್ನಣೆ ಪಡೆಯಬಹುದಾದ ಅಪೂರ್ವ ಕಾರ್ಯಕ್ರಮ. ಕಾರ್ಯಕ್ರಮವನ್ನು 1993ರಿಂದ ಪ್ರತಿವರ್ಷವು ಸಂಘಟಿಸಲಾಗುತ್ತಿದೆ.
- **ರಾಷ್ಟ್ರೀಯ ಪರಿಸರ ಜಾಗೃತಿ ಆಂದೋಲನ :** ಭಾರತ ಸರ್ಕಾರದ ಅರಣ್ಯ–ಪರಿಸರ ಇಲಾಖೆಯಿಂದ ಪ್ರಾಯೋಜಿತ ರಾಷ್ಟ್ರವ್ಯಾಪಿ ಪರಿಸರ ಸಂರಕ್ಷಣಾ ಚಟುವಟಿಕೆಗಳನ್ನು 1996ರಿಂದಲೂ ಆಯೋಜಿಸಲಾಗುತ್ತಿದೆ.
- **ರಾಷ್ಟ್ರೀಯ ವಿಜ್ಞಾನ ದಿನಾಚರಣೆ :** ಪ್ರತಿ ವರ್ಷ ಫೆಬ್ರವರಿ 28 ರಂದು ಸರ್ ಸಿ.ವಿ. ರಾಮನ್‌ರ ವಿಖ್ಯಾತ ರಾಮನ್ ಪರಿಣಾಮದ ಪ್ರಕಟಣೆಯ ದ್ಯೋತಕವಾಗಿ ವೈಶಿಷ್ಟ್ಯಮಯ ವಿಜ್ಞಾನ ಕಾರ್ಯಕ್ರಮಗಳ ಆಯೋಜನೆ.
- **ವಿಶ್ವ ಪರಿಸರ ದಿನಾಚರಣೆ :** ಪ್ರತಿವರ್ಷ ಜೂನ್ 5 ರಂದು ಆಚರಿಸಲ್ಪಡುವ ಜಾಗತಿಕ ಪರಿಸರ ಜಾಗೃತಿ ಕಾರ್ಯಕ್ರಮ.
- **ರಾಜ್ಯಮಟ್ಟದ ವಿಜ್ಞಾನ ಕಾರ್ಯಾಗಾರಗಳು :** ಆಯ್ದ ಪ್ರೌಢ/ಪ್ರಾಥಮಿಕ ಶಾಲಾ ಶಿಕ್ಷಕರಿಗೆ ವಿಶೇಷ ವಿಜ್ಞಾನ ತರಬೇತಿ ಕಾರ್ಯಾಗಾರಗಳು.
- **ರಾಜ್ಯಮಟ್ಟದ ವಿಜ್ಞಾನ ಪ್ರಬಂಧ ಸ್ಪರ್ಧೆ :** ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದಲ್ಲಿ ಆಯೋಜನೆ ಗೊಳ್ಳುವ ಶ್ರೀ ಶೇಷಾಚಲಂ ದತ್ತಿ ಕಾರ್ಯಕ್ರಮ.

ಲೇಸರ್ ತರಬೇತಿ ಕಾರ್ಯಾಗಾರ


ಮಣ್ಣು ನಿರ್ವಹಣೆ ಕಾರ್ಯಾಗಾರ


ರಾಜ್ಯಮಟ್ಟದ ವಿಜ್ಞಾನ ರಸಪ್ರಶ್ನೆ ಸ್ಪರ್ಧೆ


ರಾಜ್ಯಮಟ್ಟದ ವಿಜ್ಞಾನ ಸಾಹಿತಿಗಳ ಸಮಾವೇಶ


ರಾಜ್ಯ ಮಟ್ಟದ ವಿಜ್ಞಾನ ವಸ್ತುಪ್ರದರ್ಶನ


ರಾಷ್ಟ್ರಮಟ್ಟದ ಮಕ್ಕಳ ವಿಜ್ಞಾನ ಸಮಾವೇಶದಲ್ಲಿ ಡಾ. ಎಚ್.ಎನ್. ಮತ್ತು ಡಾ. ಕಲಾಂ


ಕರ್ನಾಟಕ ವಿಜ್ಞಾನ ವಿದ್ಯಾ ಜಾಗೃತಿ ಕಾರ್ಯಕ್ರಮ


ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮ
